several Commonwealth countries visited Karnataka. The General Council of the Association and the United Kingdom Branch arrange annually seminars on Parliamentary practice and procedure which are open to all Branches. Delegates from different States in our country are sent to such Seminars by turns, Some of the Presiding Officers from Karnataka have attended these Seminars.

I may refer to one or two other important activities of the Karnataka Branch of the Association. Every year we conduct Courses in Parliamentary Practice and Procedure for Students of Political science in the three Universities in the State, The course is of a duration of about 10 days, when lectures on different aspects of Parliamentary Practice and Procedure are arranged for the students the students are also enabled to witness the proceedings of the Houses of Legislature and meet Leaders of Political Parties also. We have conducted Orientation Seminars for Members of Legislature.

During the Commonwealth Conference in Ottawa last September the Association's Executive Committee warmly endorsed a proposal that a fresh commitment in support of the Association should be sought on the floor of each House of Parliament as near as possible on the same day right across the Commonwealth.

MONDAY 13TH MARCH COMMONWEALTH DAY was suggested as a target date.

In step with this proposal, I am making this statement today as the House was not in Session on 13th March.

I appeal to the Members to enrol themselves as members and take more interest in the activities of the Association and avail all the facilities that are available to members.

ಶ್ರೀ ಎಸ್. ಎಸ್. ಆರಕೇರಿ.—೨೦ ವರ್ಷಗಳಲ್ಲಿ ಡೆಲಿಗೇಟ್ಸ್ ಪೈಕಿ ಹೊರ ದೇಶಗಳಿಗೆ ಎಷ್ಟು ಜನ ಷೆಡ್ಯೂಲ್ಡ್ ಕ್ಯಾಸ್ಟ್ ಸದಸ್ಯರು ಹೋಗಿದ್ದಾರೆ ?

ಶ್ರೀ ಕೆ. ಎಚ್. ರಂಗನಾಥ್.—ಸ್ಪೀಕರ್ ಮತ್ತು ಬೇರೆಯವರು ಸೇರಿ ತೀರ್ಮಾನ ಮಾಡತಕ್ಕ ವಿಷಯ ಇದು. ಸಭೆ ಹೇಳತಕ್ಕ ವಿಚಾರವಲ್ಲ.

ಶ್ರೀ ಎಸ್. ಎಸ್. ಆರಕೇರಿ.—ಮಾನ್ಯ ಅಧ್ಯಕ್ಷರು ಸ್ಟೇಟ್‌ಮೆಂಟ್ ಓದಿದಮೇಲೆ ನಾನು ಸ್ಪಷ್ಟೀಕರಣ ಕೇಳಿದೆ. ಸ್ಪಷ್ಟೀಕರಣ ಕೇಳಿದಾಗ ಅದಕ್ಕೆ ಉತ್ತರ ಹೇಳಬೇಕಾದ್ದು ನ್ಯಾಯಪಾದುದು.

ಅಧ್ಯಕ್ಷರು.—ನನ್ನ ಹತ್ತಿರ ಇದ್ದ ಸಮಾಚಾರವನ್ನು ನಾನು ಓದಿದ್ದೇನೆ ಇನ್ನೂ ವಿವರ ಬೇಕಾದರೆ ಪರಿಪ್ಟೆ ಮಾಡಿ ಹೇಳುತ್ತೇನೆ.

Matter Under Rule 312 (Contd.)

(2) re : NRWS Scheme in Haradanahalli of Hassan District

ಶ್ರೀ ಎಚ್. ಡಿ. ದೇವೇಗೌಡ.—ನನ್ನ ಹೆಸರಿನಲ್ಲಿ ರೂಲ್ ೩೧೨ರ ಕೆಳಗೆ ಒಂದು ಸೂಚನೆ ಕಳುಹಿಸಿದ್ದೆ. ಈಗ ನಾನು ಹೆಚ್ಚು ಕಾಲ ತೆಗೆದುಕೊಳ್ಳುವುದಿಲ್ಲ, ಅಧ್ಯಕ್ಷರು ಅವಕಾಶ ಕೊಟ್ಟರೆ ಮಾನ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ. ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಕಳೆದಸಾರಿ ಮುಖ್ಯ

ಮಂತ್ರಿಗಳು ಸಭೆಯಲ್ಲಿ ಉತ್ತರ ಕೊಡುವಾಗ ಎಸ್. ಆರ್. ಬಟ್ಟು ಸ್ಕೀಂನಲ್ಲಿ ಆದ ಕೆಲಸ ಎಲ್ಲೆಲ್ಲಿ ಕೆಟ್ಟುಹೋಗಿದೆ ಅಲ್ಲೆಲ್ಲಾ ಅವುಗಳನ್ನು ರಿಪೇರಿ ಮಾಡಿಸುವುದಕ್ಕೆ ಸರ್ಕಾರ ಆದೇಶ ಕೊಡುತ್ತದೆಂದು ಹೇಳಿದ್ದರು. ಕಳೆದಸಾರಿ ವೋಟ್ ಆನ್ ಅಕೌಂಟ್ ಮೇಲೆ ಉತ್ತರ ಕೊಡುವಾಗ ತಾಂತ್ರಿಕವಾಗಿ ಕೆಟ್ಟು ಹೋಗಿರುವ ಕಡೆಗಳಲ್ಲಿ ರಿಪೇರಿ ಮಾಡಿಸಿ ೫ ಪರ್ಸೆಂಟ್ ರೆವಿನ್ಯೂನಲ್ಲಿ ಡಿಡಕ್ಟ್ ಮಾಡಿಸಿ ಅಡ್ಜಸ್ಟ್‌ಮೆಂಟ್ ಮಾಡಿಸುವುದಕ್ಕೆ ಸೂಚನೆ ಕೊಡುತ್ತೇನೆಂದು ಹೇಳಿದ್ದಿರಿ. ಕೆಲವು ಸ್ಕೀಂಗಳ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ನೋಟೀಸ್ ಕೊಟ್ಟಿದ್ದೆ. ನಾನು ಆಗಲೇ ಬಂದಿರಲಿಲ್ಲ, ನನ್ನದು ತಪ್ಪಿದೆ, ನಾನು ಬರುವುದು ಐದು ನಿಮಿಷ ತಡವಾಯಿತು. ಆದ್ದರಿಂದ ಸಂಬಂಧಪಟ್ಟ ಮಂತ್ರಿಗಳು ಈಗಲಾದರೂ ನಿರ್ದೇಶನ ಕೊಟ್ಟು ಕೆಟ್ಟುಹೋಗಿರುವುದನ್ನು ಸರಿಮಾಡಿಸುತ್ತೇವೆ ಎಂದು ಹೇಳಿದರೆ ಸಾಕು.

ಶ್ರೀ ಡಿ. ದೇವರಾಜ ಆರಸ್.—ಎಲ್ಲೆಲ್ಲಿ ಎಂಬುದನ್ನು ಹೇಳಿ.

ಶ್ರೀ ಎಚ್. ಡಿ. ದೇವೇಗೌಡ.—ನಾನು ನೋಟೀಸ್‌ನಲ್ಲಿ ಹೆಸರುಗಳನ್ನು ಹೇಳಿದ್ದೇನೆ. ಹಾಸನ ಜಿಲ್ಲೆ ಹರದನಹಳ್ಳಿ ಮುಂತಾದ ಕಡೆಗಳಲ್ಲಿ ಸ್ಕೀಂ ಇನಾಗ್ಯುರೇಟ್ ಮಾಡಿದ ಮಾರನೇ ದಿವಸವೇ ಕೆಟ್ಟು ಹೋಗಿದೆ. ತಾಂತ್ರಿಕ ದೋಷದಿಂದ ಕುಡಿಯುವ ನೀರಿನ ಯೋಜನೆ ಕಾರ್ಯಗತವಾಗಿಲ್ಲ. ತಕ್ಷಣ ಇದನ್ನು ರಿಪೇರಿ ಮಾಡಿಸಿ ಸರಿಮಾಡಿಸುವಂತೆ ಡೆಪ್ಯೂಟಿ ಕಮಿಷನರ್ ಅವರಿಗೆ ನಿರ್ದೇಶನ ಕೊಡಿ ಎಂದು ಕೇಳಿಕೊಳ್ಳುತ್ತೇನೆ.

11-00 A. M.

ಶ್ರೀ ಕೆ. ಪ್ರಭಾಕರ್.—ತಾವು ಹೇಳುವ ಬಗ್ಗೆ ಡೈರಕ್ಷನ್ ಕೊಟ್ಟು ಮಾಡಿಸಿಕೊಡುತ್ತೇನೆ. ಈಗ ಅಲ್ಲಿ ರಿಪೇರಿಯಾಗಬೇಕಾಗಿರುವುದು ಯಾವುದು ಇಲ್ಲ. ಫಾರ್ ಪಾಂಟ್ ಆಫ್ ಎಲೆಕ್ಟ್ರಿಸಿಟಿ ಚಾರ್ಜ್ ಇರಬೇಕು.

ಶ್ರೀ ಎಚ್. ಡಿ. ದೇವೇಗೌಡ.—ಎಲೆಕ್ಟ್ರಿಸಿಟಿ ಚಾರ್ಜ್‌ಸ್‌ನಿಂದ ಅಲ್ಲ, ಸ್ಕೀಮುಗಳು ಇನಾಗ್ಯುರೇಟ್ ಮಾಡಿದ ಮೂರುನಾಲ್ಕು ದಿವಸಗಳಿಗೆ ಕೆಟ್ಟುಹೋಗಿವೆ. ಆದರಲ್ಲಿ ಒಂದು ಸ್ಕೀಮು ಮಾತ್ರ ಎರಡು ದಿವಸದಲ್ಲಿ ಕೆಟ್ಟು ಹೋಯಿತು. ಇನ್ನುಳಿದ ನಾಲ್ಕು ಸ್ಕೀಮುಗಳು, ಇನಾಗ್ಯುರೇಟ್ ಮಾಡಿ ಸ್ವಿಚ್ ಆನ್ ಮಾಡಿದ ಮಾರನೆಯ ದಿವಸವೇ ಕೆಟ್ಟು ಹೋಗಿವೆ. ಇದರ ಬಗ್ಗೆ ನಾನು ಚರ್ಚೆ ಮಾಡಲಿಕ್ಕೆ ಹೋಗುವುದಿಲ್ಲ. ಅಲ್ಲಿ ಟೆಕ್ನಿಕಲ್ ಡಿಫಿಕಲ್ಟೀಸ್ ಇದೆ, ಬೇರೆ ಹೊರಗಡೆಯಿಂದ ಮೆಷಿನ್ ತರಿಸಿ, ಸರಿಪಡಿಸಬೇಕು ಎಂದು ಹೇಳುತ್ತಾರೆ, ತಮಗೆ ತಪ್ಪು ವರದಿ ಕಳುಹಿಸಿರಬೇಕು, ನಾನು ಆ ಸ್ಥಳಗಳಲ್ಲಿ ಖುದ್ದು ಹೋಗಿ ನೋಡಿದ್ದೇನೆ. ಅಲ್ಲಿ ಪಂಚಾಯಿತಿಯವರು ಎಷ್ಟು ಪರಸೆಂಟ್ ಹಣ ಕೊಡಬೇಕು ಅದನ್ನು ಕೊಡುತ್ತಾರೆ, ಉಳಿದ ಹಣವನ್ನು ಸರ್ಕಾರದವರು ಕೊಟ್ಟು ಸರಿಪಡಿಸಬೇಕು ಇದರ ಬಗ್ಗೆ ಕೂಡಲೇ ಡೈರೆಕ್ಷನ್ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

SR D. DEVARAJ URS (Chief Minister).—Now that the hon. Member has drawn attention of the Government to these five schemes, orders will be issued immediately to rectify whatever my be the defect. I agree I had promised last time. Subsequently the cost incurred should be recovered from the grant that is to be given to the panchayats.

Notice of an adjournment motion

re : Withdrawal of consent of the State Government given under the Delhi Police Establishment Act of 1946 to the Central Government.

ಶ್ರೀ ಎಸ್ ಆರ್. ಬೊಮ್ಮಾಯಿ (ಹುಬ್ಬಳ್ಳಿ).—ಅಧ್ಯಕ್ಷರೇ, ರೂಲ್ ನಂ. ೫೧-೫೧ರ ಕೆಳಗೆ ನೋಟೀಸ್ ಕೊಟ್ಟಿದ್ದೇನೆ. ನನ್ನ ಜೊತೆಗೆ ಮಾನ್ಯ ಸಭೆಯ ಅನೇಕ ಸದಸ್ಯರು ಅದಕ್ಕೆ ಸಹಿ ಹಾಕಿದ್ದಾರೆ.....